VISVESVARAYA TECHNOLOGICAL UNIVERSITY
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"Jnana Sangama", Belagavi - 590 018, Karnataka State, INDIA

Phone : (0831) 2405468
Fax : (0831) 2405467
Email : registrar@vtu.ac.in
website : www.vtu.ac.in

ಡಾ. ಆನಂದ. ಎಸ್. ದೇಶಪಾಂಡೆ ಬಿ.ಇ.,ಎಂ.ಟೆಕ್, ಪಿಹೆಚ್‌ಡಿ.
ಕುಲಸಚಿವರು

ದೂರವಾಣಿ ಸಂ: (0831)2405468
ಫ್ಯಾಕ್ಸ್.ಸಂ: (0831)2405467

ಉಲ್ಲೇಖ: ವಿತಾವಿ/ಬೆಳಗಾವಿ/ಪ್ರಸಾರಂಗ/2020-21/41

ದಿನಾಂಕ : 8 MAY 2020

## ಪ್ರಕಟಣೆ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯು ಜನಪ್ರಿಯ ತಾಂತ್ರಿಕ ಶಿಕ್ಷಣ ಮಾಲೆಯ ಅಡಿಯಲ್ಲಿ ಜನಸಾಮಾನ್ಯರಿಗೆ ತಂತ್ರಜ್ಞಾನದ ಸುಲಭ ಅರಿವಾಗುವ ನಿಟ್ಟಿನಲ್ಲಿ ಇಂದಿನ ತಂತ್ರಜ್ಞಾನದ ಮಾಹಿತಿಯನ್ನು ಕನ್ನಡದಲ್ಲಿ ತಿಳಿಸುವ ಸಲುವಾಗಿ ಕನ್ನಡದಲ್ಲಿ ತಾಂತ್ರಿಕ ಪುಸ್ತಕಗಳನ್ನು ಬರೆಯುವ ಬರಹಗಾರರಿಂದ ಹಸ್ತಪ್ರತಿಗಳನ್ನು ಆಹ್ವಾನಿಸಿದೆ. ನಾಡಿನ ತಾಂತ್ರಿಕ ಕಾಲೇಜುಗಳ ಅಧ್ಯಾಪಕರುಗಳು, ಡಿಪ್ಲೊಮಾ, ಐಟಿಐ, ಕಾಲೆಜುಗಳ ಶಿಕ್ಷಕರು, ಸಂಶೋಧಕರು, ಹಾಗೂ ಸಾರ್ವಜನಿಕರು ಕೂಡ ಬರೆಯಬಹುದಾಗಿದೆ. ಉದ್ದೇಶಿತ ಪುಸ್ತಕದ ಪ್ರತಿ ಕಳಿಸುವ ಲೇಖಕರು ಮೊದಲು ಪ್ರಸ್ತಾವನೆಯನ್ನು ಸಲ್ಲಿಸಬೇಕು. ಪುಸ್ತಕ ಯಾವ ಕ್ಷೇತ್ರಕ್ಕೆ ಸಂಬಂದಿಸಿದೆ, ಅದು ನಿತ್ಯ ಬದುಕಿಗೆ ಎಷ್ಟು ಪ್ರಸ್ತುತ..? ಸಮಾಜಕ್ಕೆ ಏನೆಲ್ಲ ಒಳಿತು ಕೆಡಕುಗಳು ಆಗುತ್ತಿವೆ ಈ ಮಾಹಿತಿಯನ್ನೊಳಗೊಂಡ ಪ್ರಸ್ತಾವಣೆಯನ್ನು ದಿನಾಂಕ 31-05-2020 ರ ಒಳಗೆ ಕಳುಹಿಸಬೇಕು. ಬರೆಯುವ ಪುಸ್ತಕ ಎ4 ಅಳತೆಯ ಕಾಗದದಲ್ಲಿ ಟೈಪು ಮಾಡಿರಬೇಕು, ಪುಸ್ತಕ ರೂಪದಲ್ಲಿ ಪ್ರಕಟಿಸಿದಾಗ ಸುಮಾರು ಐವತ್ತು ಪುಟಗಳಿಗಿಂತ ಕಡಿಮೆ ಇರಬಾರದು, ಕೈ ಬರಹವನ್ನು ಸ್ವೀಕರಿಸಲಾಗದು. ವಿಷಯಕ್ಕೆ ಅಗತ್ಯ ಎನಿಸುವ ಚಿತ್ರಗಳನ್ನು ಲೇಖಕರೆ ಸಲ್ಲಿಸಬೇಕು ಮತ್ತು ಸ್ಪಷ್ಟವಾದ ಚಿತ್ರಗಳಿದ್ದರೆ ಮಾತ್ರ ಬಳಸಲಾಗುವುದು. ಉಲ್ಲೇಖಕ್ಕೆ ಬಳಸಿದ ಪುಸ್ತಕಗಳ ಮಾಹಿತಿ, ಪುಟದ ಸಂಖ್ಯೆ ಖಡ್ಡಾಯವಾಗಿ ನಮೂದಿಸಬೇಕು. ಇದಕ್ಕೆ ವಿಶ್ವವಿದ್ಯಾಲಯ ಜವಾಬ್ದಾರವಲ್ಲ. ಪುಸ್ತಕಗಳ ಕುರಿತಾದ ಪ್ರಸ್ತಾವನೆಗಳನ್ನು ದಿನಾಂಕ 31-05-2020 ಒಳಗೆ ನಿರ್ದೇಶಕರು, ಪ್ರಸಾರಾಂಗ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಜ್ಞಾನಸಂಗಮ ಬೆಳಗಾವಿ-18 ಇವರಿಗೆ ಕಳುಹಿಸಬೇಕು.

08/5/2020.

ಕುಲಸಚಿವರು
ವಿತಾವಿ, ಬೆಳಗಾವಿ.

# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

## "ಪ್ರಸಾರಾಂಗ"

### ಜನಪ್ರಿಯ ತಾಂತ್ರಿಕ ಶಿಕ್ಷಣ ಮಾಲೆಯ ಕನ್ನಡ ಪುಸ್ತಕ ಪ್ರಕಟಣೆಗಾಗಿ ಪ್ರಸ್ತಾವನೆ ಕಳಿಸಲು ಅರ್ಜಿ

ಭಾವಚಿತ್ರ

| | | | | |
|---|---|---|---|---|
| 1. ಹೆಸರು | | | | |
| 2) ಹುದ್ದೆ<br>ಲಿಂಗ<br>ಹುಟ್ಟಿದ ದಿನಾಂಕ | | | | |
| 2. ದೂರವಾಣಿ ಸಂಖ್ಯೆ,<br>ಇ-ಮೇಲ್ ವಿಳಾಸ | | | | |
| 3. ಸಂಪರ್ಕ ವಿಳಾಸ | | | | |
| 4. ಖಾಯಂ ವಿಳಾಸ | | | | |
| 5. ಶೈಕ್ಷಣಿಕ ವಿವರಗಳು | | | | |
| 6. ಉದ್ದೇಶಿತ ಪುಸ್ತಕದ ತಲೆಬರಹ | | | | |
| 7. ಸಂಬಂದಿಸಿದ ಕ್ಷೇತ್ರ ಗುರುತಿಸಿ | ವಿಜ್ಞಾನ ☐<br>ತಂತ್ರಜ್ಞಾನ ☐<br>ನಿರ್ವಹಣೆ ☐ | | ವಿಜ್ಞಾನಿಗಳ ಜೀವನಚರಿತ್ರೆ ☐<br>ಸಾಹಿತ್ಯ ☐<br>ಇತರೆ.. ☐ | |
| 6. ಯಾವ ವಿಷಯದಲ್ಲಿ ಅನುಭವ ಅಥವಾ ನೈಪುಣ್ಯತೆ ಹೊಂದಿದ್ದೀರಿ..?<br>ಅಥವಾ<br>ನೈಪುಣ್ಯತೆ ಹೊಂದಿರುವ ವಿಷಯಗಳು | | | | |
| 7. ಪ್ರಸ್ತುತ ಬರೆಯಬೇಕೆಂದು ಉದ್ದೇಶಿಸಿರುವ ವಿಷಯದ ಕುರಿತು ಪ್ರಸ್ತಾವನೆ (2 ಪುಟಗಳವರೆಗೆ) | | | | |
| 8. ಅ) ತಾಂತ್ರಿಕ ಬರಹಗಳ ಅನುಭವ<br>ಬ) ಪುಸ್ತಕ ರೂಪದಲ್ಲಿ ಬರಹ ಸೇವೆ ಮತ್ತು ಮಾಡಿದ ಸಾಧನೆಗಳ ಬಗ್ಗೆ (ಇದ್ದಲ್ಲಿ) ಪ್ರಮಾಣಪತ್ರ/ ದಾಖಲೆಗಳ ಪ್ರತಿ ಲಗತ್ತಿಸುವುದು) | | | | |
| 9. ಈ ಹಿಂದೆ ಯಾವುದಾದರೂ ಸಂಸ್ಥೆ / ವಿಶ್ವವಿದ್ಯಾನಿಲಯ/ಪತ್ರಿಕೆಗಳಿಗೆ/ಅಕಾಡೆಮಿಗಳಿಗೆ ಪುಸ್ತಕಗಳನ್ನು ಬರೆದು ಸಲ್ಲಿಸಿದ್ದರೆ (ಸಲ್ಲಿಸಿದ ವಿವರ ನೀಡುವುದು) | | | | |

ಸ್ಥಳ :

ಲೇಖಕರ ಸಹಿ

ದಿನಾಂಕ:

# ಸೂಚನೆಗಳು

- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ಪ್ರಸಾರಾಂಗ ವಿಭಾಗದಿಂದ ಜನಪ್ರಿಯ ತಾಂತ್ರಿಕ ಶಿಕ್ಷಣ ಮಾಲೆಯ 4ನೇ ಸರಣಿ ಕನ್ನಡ ಪುಸ್ತಕಗಳ ಪ್ರಕಟಣೆಗಾಗಿ ನಾಡಿನ ಹಿರಿಯ ಕಿರಿಯ ತಾಂತ್ರಿಕ ಬರಹಗಾರರಿಂದ ತಂತ್ರಜ್ಞಾನದ ಬಗೆಗೆ ಕನ್ನಡದಲ್ಲಿ ಜನಸಾಮಾನ್ಯರಿಗೆ ತಂತ್ರಜ್ಞಾನದ ಅರಿವು ಮೂಡಿಸುವ ನಿಟ್ಟಿನಲ್ಲಿ ಪ್ರಸ್ತುತ ತಂತ್ರಜ್ಞಾನಕ್ಕೆ ಸಂಬಂದಿಸಿದ ವಿಷಯಗಳನ್ನಾಧರಿಸಿ ಬರೆದಿರುವಂತ ಪುಸ್ತಕಗಳ ಹಸ್ತಪ್ರತಿಗಳಿಗಾಗಿ ಆಹ್ವಾನಿಸಲಾಗಿದೆ.
- ಪುಸ್ತಕಗಳು ತಂತ್ರಜ್ಞಾನ/ವಿಜ್ಞಾನ/ಸಾಹಿತ್ಯ/ನಿರ್ವಹಣೆ/ವೈದ್ಯಕೀಯ ಇತ್ಯಾದಿ ಕ್ಷೇತ್ರಗಳ ವಿಷಯಕ್ಕೆ ಸಂಬಂದಿಸಿರಬೇಕು ಯಾವೂದೇ ವಿಶ್ವವಿದ್ಯಾಲಯಕ್ಕೆ, ಶಿಕ್ಷಣ ಸಂಸ್ಥೆಗೆ ಬರೆದಿರುವ ಪಠ್ಯವಾಗಲಿ, ಪಿ.ಹೆಚ್‌ಡಿ ಕೃತಿಗಳನ್ನು ಪ್ರಕಟಣೆಗೆ ಸ್ವೀಕರಿಸಲಾಗದು. ವಿಶ್ವವಿದ್ಯಾಲಯ ಆಯ್ಕೆಯಾದ ಹಸ್ತಪ್ರತಿಗಳನ್ನು ಮುದ್ರಿಸಿ ಪ್ರಕಟಣೆ ಮಾಡುತ್ತದೆ.
- ಹಸ್ತಪ್ರತಿಗಳ ವಿಷಯವಾರು ಆಯ್ಕೆಯಲ್ಲಿ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ. ಆಯ್ಕೆಯಾದ ಲೇಖಕರಿಗೆ ಪೋನ ಮುಖಾಂತರ ತಿಳಿಸಲಾಗುವುದು. ಲೇಖಕರು ವಿಶ್ವವಿದ್ಯಾಲಯಕ್ಕೆ ಹಸ್ತಪ್ರತಿ ಕಳಿಸುವ ಮುನ್ನ ಒಂದು ಪ್ರತಿಯನ್ನು ಕಾದಿಟ್ಟುಕೊಳ್ಳಬೇಕು ಅದಕ್ಕಾಗಿ ಇಲ್ಲಿಂದ ಯಾವ ಪ್ರತಿಯನ್ನು ನೀಡಲಾಗುವುದಿಲ್ಲ.
- ಆಯ್ಕೆಯಾದ ಹಸ್ತಪ್ರತಿಗಳ ತಿದ್ದುಪಡಿಗೆ ಮೂಲ ಲೇಖಕರೆ ವಿಶ್ವವಿದ್ಯಾಲಯಕ್ಕೆ ಬಂದು ಕರಡು ತಿದ್ದುಪಡಿ ಮಾಡಿ ಪ್ರಕಟಣೆಗೆ ಸಿದ್ದಪಡಿಸಿ ಕೊಡಬೇಕು ಅಂಚೆಮೂಲಕ/ ಮಿಂಚಂಚು/ಇ–ಮೇಲ್ ಮೂಲಕ ತಿದ್ದುಪಡಿ ಮಾಡಿಕೊಡಲು ಅವಕಾಶವಿಲ್ಲ.
- ಪ್ರಕಟಣೆಗೆ ಆಯ್ಕೆಯಾದ ಕೃತಿಗಳನ್ನು ವಿಶ್ವವಿದ್ಯಾಲಯವೇ ಪ್ರಸಾರಾಂಗದ ಮೂಲಕ ಪ್ರಕಟಿಸಿ ಬಿಡುಗಡೆ ಮಾಡುತ್ತದೆ. ಮತ್ತು ಸೂಕ್ತ ಗೌರವಧನ ಕೊಟ್ಟು ಲೇಖಕರನ್ನು ಗೌರವಿಸುತ್ತದೆ.
- ಆಸಕ್ತ ಲೇಖಕರು ವಿತಾವಿ ವೆಬಸೈಟ್‌ನಲ್ಲಿ ನಮೂದಿಸಿದ/ಪ್ರಕಟಿಸಿದ ವಿಧಾನದಲ್ಲಿ ಪ್ರಸ್ತಾವಣೆಗಳನ್ನು ಇ–ಮೇಲ್ ಮುಖಾಂತರ prasaranga@vtu.ac.in ಗೆ ಕಳಿಸಬಹುದು, ಜೊತೆಗೆ hard copy ಕೂಡ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.
- ಆಯ್ಕೆಯಾದ ಪ್ರಸ್ತಾವಣೆಯ ವಿಷಯ ಸದರಿ ಪುಸ್ತಕದ ಗುಣಮಟ್ಟದಲ್ಲಿ ದೊರೆಯದಿದ್ದರೆ ಅಂತಹ ಪುಸ್ತಕವನ್ನು ತಿರಸ್ಕರಿಸುವ ಹಕ್ಕು ವಿಶ್ವವಿದ್ಯಾಲಯ ಕಾಯ್ದಿರಿಸಿಕೊಂಡಿರುತ್ತದೆ. ಇದರ ಕುರಿತು ಯಾವೂದೇ ಪತ್ರ ವ್ಯವಹಾರಕ್ಕೆ ಆಸ್ಪದವಿಲ್ಲ.
- ಎಲ್ಲ ವಿಚಾರಗಳಿಗೂ ವಿಶ್ವವಿದ್ಯಾಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.

| | | |
|---|---|---|
| ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ | : | 31–05–2020 |
| ಪ್ರಸ್ತಾವನೆಗಳ ಆಯ್ಕೆಯ ಅಂತಿಮ ದಿನ | : | 20–06–2020 |
| ಆಯ್ಕೆಯಾದ ಪ್ರಸ್ತಾವನೆಗಳ ಕುರಿತು ಪುಸ್ತಕದ | | |

ಹಸ್ತಪ್ರತಿ ಸಲ್ಲಿಸಲು ಲೇಖಕರಿಗೆ ಕೊನೆಯ ದಿನಾಂಕ : 30-08-2020

ಆಯ್ಕೆಯಾದ ಪುಸ್ತಕದ ಲೇಖಕರು ಪುಸ್ತಕದ ಕರಡುಪ್ರತಿಯ soft copy, hard copy ಎರಡನ್ನು ಕಡ್ಡಾಯವಾಗಿ ಕಳಿಸಬೇಕು

**ಸಂಪರ್ಕ ವಿಳಾಸ :**

ನಿರ್ದೇಶಕರು, ಪ್ರಸಾರಾಂಗ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ-590018.

ದೂರವಾಣಿ-0831-2498155, ಇ-ಮೇಲ್- prasaranga@vtu.ac.in